5/6/22, 10:52 AM 52e882c5-bf12-44f5-b4d7-66a885fd8632 (832×451)



# ಪ್ರಾಕ್ತನಶಾಸ್ತ್ರಜ್ಞ ರವಿ ಕೋರಿಶೆಟ್ಟರ್‌ರಿಗೆ ವಾಖಂಕರ್ ಪ್ರಶಸ್ತಿ

**ಕನ್ನಡನಾಡು ವಾರ್ತೆ**

**ಭೋಪಾಲ್,ಮೇ.04:** ಧಾರವಾಡದ ಹಿರಿಯ ಪ್ರಾಕ್ತನ ಶಾಸ್ತ್ರ ತಜ್ಞ ರವಿ ಕೋರಿಶೆಟ್ಟರ್ ಅವರಿಗೆ 2018–19ನೆ ಸಾಲಿನ ವಿಷ್ಣು ಶ್ರೀಧರ್ ವಾಖಂಕರ್ ರಾಷ್ಟ್ರೀಯ ಪ್ರಶಸ್ತಿ ನೀಡಿ ಸತ್ಕಾರಿಸಲಾಯಿತು.

ಬುಧುವಾರದಂದು ಭೋಪಾಲಿನಲ್ಲಿ ನಡೆದ ಸಮಾರಂಭದಲ್ಲಿ ಶ್ರೀಮತಿ ಉಷಾ ಬಾಬುಸಿಂಗ್ ಠಾಕುರ್, ಸಂಸ್ಕೃತಿ ಸಚಿವೆ ರಾಷ್ಟ್ರೀಯ ಪ್ರಶಸ್ತಿಯನ್ನು ಪ್ರಧಾನ್ ಮಾಡಿದರು. ಮಧ್ಯ ಪ್ರದೇಶ ಸರ್ಕಾರ್ ಕೊಡಮಾಡುವ ಈ ಪ್ರಶಸ್ತಿಯು ಫಲಕ ಹಾಗು ಎರಡು ಲಕ್ಷ ನಗದು ಒಳಗೊಂಡಿದೆ.

ರವಿ ಕೋರಿಶೆಟ್ಟರ್ ಅವರು, ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಹಾಗೂ ಪ್ರಾಕ್ತನಶಾಸ್ತ್ರ ವಿಭಾಗದಲ್ಲಿ (1989–2013) ಸೇವೆ ಸಲ್ಲಿಸುತ್ತ ಸುಮಾರು ಐವತ್ತು ವರ್ಷದಿಂದ ಪ್ರಾಗೈತಿಹಾಸಿಕ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ.

ಅವರ ಸುಮಾತ್ರ ಮೂಲದ ಜ್ವಾಲಾಮುಖಿ ಬೂದಿಯನ್ನು ಆಂಧ್ರ ಪ್ರದೇಶದಲ್ಲಿ ಮಾಡಿದ ಆವಿಷ್ಕಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಮಧ್ಯ ಶಿಲಾಯುಗದ ಅಧ್ಯಯನದಲ್ಲಿ ಮುಂಚೂಣಿಯಲ್ಲಿ ತಂದಿತು. ಕೋರಿಶೆಟ್ಟರ್ ಅವರು ದಕ್ಷಿಣ ಭಾರತದಲ್ಲಿ ಸಾಕಷ್ಟು ಉತ್ಖನನ ಹಾಗು ಸಂಶೋಧನೆಗಳನ್ನು ಮಾಡಿದ ಹಿನ್ನಲೆಯಲ್ಲಿ ಪ್ರಗೈತಿಹಾಸದ ತಜ್ಞರೆಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಿದ್ದಾರೆ.

ಸದ್ಯ ಅವರು ಬೆಂಗಳೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನಲ್ಲಿ ಅಡ್ಜಂಕ್ಟ್ ಪ್ರೊಫೆಸರಾಗಿ ಹಾಗು ತಮ್ಮ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲಾ ಅಡಳಿತದಲ್ಲಿ ನೆರವಿನಿಂದ ನಿರ್ಮಿಸಿರುವ ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ ಆರ್ಕಿಯಾಲಜಿಕಲ್ ಮ್ಯೂಸಿಯಂನ ಗೌರವ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಭೆಯನ್ನು ಉದ್ದೇಶಿಸಿ ಮಾತ್ನಾಡುತ್ತಾ ಶ್ರೀಮತಿ ಉಷಾ ಅವರು ತಮ್ಮ ವಿಭಾಗವು ರಾಜ್ಯದ ಪ್ರಾಚ್ಯ ವಸ್ತು, ಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳಸಿ ಮುಂದಿನ ಪೀಳಿಗೆಗೆ ತೆಗೆದುಕೊಂಡು ಹೋಗುವ ಪ್ರಯತ್ನಗಳನ್ನು ವಿವರಿಸಿದರು. "ಎಲ್ಲಿವರೆಗೆ ರವಿ ಕೊರಿಶೆಟ್ಟರ್, ನಾರಾಯಣ್ ವ್ಯಾಸ ರಂತ ಹಿರಿಯರು ನಮ್ಮ ದೇಶದ ಶ್ರೀಮಂತ ಸಂಸ್ಕೃತಿ ಇತಿಹಾಸ ಪರಂಪರೆಯನ್ನು ಹುಡಿಕಿ ಸಾಮ್ನಕ್ಕಿಸುವ ಕೆಲಸ ಮಾಡುತ್ತಾರೋ ನಮ್ಮ ದೇಶ ವಿಶ್ವಗುರು ಆಗಿತ್ತು, ಇದೆ ಮತ್ತು ಇರುತ್ತದೆ" ಎಂದರು.

ಶ್ರೀ ಶಿವಶೇಖರ್ ಶುಕ್ಲ ಪ್ರಧಾನ ಕಾರ್ಯದರ್ಶಿ ಸಂಸ್ಕೃತಿ ವಿಭಾಗ, ಮಾತನಾಡುತ್ತ ಸಂಸ್ಕೃತಿ ಪರಂಪರೆ ಜನಸಾಮಾನ್ಯರಿಗೆ ಮುಟ್ಟಬೇಕು ಅದು ಆದರೆ ಸರ್ಕಾರದ ಎಲ್ಲಾ ಪ್ರಯತ್ನಗಳು ಸಂಸ್ಕೃತಿ ಪರಂಪರೆಯನ್ನು ಉಳಿಸಲು ವಸ್ತು ಸಂಗ್ರಹಾಲಯ ಕಟ್ಟಿದ್ದು ಸಾರ್ಥಕವಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ನಾರಾಯಣ್ ವ್ಯಾಸ, ಹಿರಿಯ ಪ್ರಾಕ್ತೀನ ತಜ್ಞ ಮತ್ತು 2019–20 ಸಾಲಿನ ವಾಖಂಕರ್ ಪ್ರಶಸ್ತಿ ಪುರಸ್ಕೃತ, ಪದ್ಮಶ್ರೀ ಪುರಸ್ಕೃತ ಕೆ. ಕೆ. ಮೊಹಮ್ಮದ್ ಮತ್ತು ಹಲವಾರು ಇತಿಹಾಸ ಮತ್ತು ಪ್ರಾಕ್ತೀನಶಾಸ್ತ್ರಜ್ಞರು ಭಾಗವಹಿಸಿದ್ದರು.



ಶ್ರೀ ವಿಷ್ಣು ವಾಕಂಕರ್ ಅವರು ಒಬ್ಬ ಮಹಾನ್ ಪರಿಶೋಧಕರು, ಶಿಲ್ಪಿ, ಚಿತ್ರಕಲಾವಿದ ಹಾಗು ಸಮಾಜ ಸೇವಕರು ಆಗಿದ್ದರು. ಮಧ್ಯಪ್ರದೇಶದಲ್ಲಿ ಪ್ರಾಗೈತಿಹಾಸಿಕ ಭೀಮಬೆಟ್ಕ ಪ್ರದೇಶವನ್ನು ಕಂಡು ಹಿಡಿದವರು. ಅವರು ಭಾರತದ ಪ್ರಾಗೈತಿಹಾಸಿಕ ಕಾಲದ ಬಂಡೆಗಳ ಮೇಲಿನ ವರ್ಣ ಚಿತ್ರಕಲೆಯ ಮಹತ್ವವನ್ನು ವ್ಯವಸ್ಥಿತವಾಗಿ ಹೊರದೇಶಗಳಲ್ಲಿನ ಸಂಶೋಧಕರಿಗೆ ಸಾರಿದ್ದಾರಲ್ಲದೆ ಯುವ ಸಂಶೋಧಕರ ತಂಡಗಳನ್ನು ಕಟ್ಟಿ ಪ್ರೋತ್ಸಾಹಿಸುತ್ತಿದ್ದರು

blob:https://web.whatsapp.com/52e882c5-bf12-44f5-b4d7-66a885fd8632 1/1